

بسم الله الرّحمٰن الرّحيم

# ಪ್ರಾರ್ಥನೆಗಳ ಸ್ವೀಕರಣದ ಕುರಿತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿದ ಕೆಲವು ಘಟನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಪಂಚಮ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್,** ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **21-11-2014** ರಂದು ನೀಡಿದ **ಜುಮುಅ ಖುತುಬದ ಸಾರಾಂಶ**)

*(ತಶಹ್ಹುದ್, ತಅವ್ವುಝ್, ಸೂರತುಲ್ ಫಾತಿಹಾ ತಿಲಾವತ್ ಮಾಡಿದ ನಂತರ)* **ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಪ್ರಾರ್ಥನೆಗಳು ಅಲ್ಲಾಹನಿಂದ ಅಂಗೀಕಾರ ಪಡೆದ ಬಗ್ಗೆ ಕೆಲವು ಸಂಭವಗಳನ್ನು ವಿವರಿಸಿದ್ದಾರೆ. ಅವುಗಳನ್ನು ನಿಮ್ಮ ಮುಂದಿರಿಸುವೆನು. ಅವುಗಳಲ್ಲಿ ಅಲ್ಲಾಹನ ದೃಷ್ಟಾಂತಗಳು, ಅವನು ಮಾಡಿದ ಸಹಾಯಗಳು ಮತ್ತು ಉಪದೇಶಗಳು ವಿವರಿಸಲ್ಪಟ್ಟಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೇಳಿದರು: 'ಅಲ್ಲಾಹನು ಈ ಕಾಲಘಟ್ಟದಲ್ಲಿ ನನ್ನನ್ನು ಅವನ ದೂತನನ್ನಾಗಿ ಕಳುಹಿಸಿರುವನು. ಅಲ್ಲಾಹನಿಂದ ನೇಮಿಸಲ್ಪಟ್ಟವನ ಮಾತುಗಳನ್ನು ಆಲಿಸಿರಿ, ಅದರಲ್ಲಿಯೇ ಅನುಗ್ರಹವಿದೆ. ಈ ಜಮಾಅತಿನ ಅಭಿವೃದ್ಧಿ ಅಲ್ಲಾಹನು ನಿರ್ಣಯಿಸಿದ ವಿಧಿಗಳಲ್ಲಿ ಒಂದಾಗಿದೆ. ಅಲ್ಲಾಹನಿಂದ ನೇಮಿಸಲ್ಪಟ್ಟವರನ್ನು ನಂಬುವುದರಿಂದಲೇ ಮಾನವೀಯತೆ ಬಾಕಿಯಾಗಿ ಉಳಿಯುವುದು.'

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದಿರುವರು: 'ಲುಧಿಯಾನದ ಗಣ್ಯ ವ್ಯಕ್ತಿ ನವಾಬ್ ಅಲಿ ಮುಹಮ್ಮದ್ ಖಾನ್ ಸಾಹೇಬರು ನನಗೆ ಪತ್ರ ಬರೆದು, ತನ್ನ ಸಂಪಾದನೆಯ ಕೆಲವು ಮಾರ್ಗಗಳು ಸ್ಥಗಿತಗೊಂಡಿವೆ, ಅವುಗಳು ತೆರೆಯಲ್ಪಡಲು ನನಗೋಸ್ಕರ ಪ್ರಾರ್ಥಿಸಿರಿ ಎಂದು ಹೇಳಿದರು. ಆಗ ನಾನು ಅವರಿಗೋಸ್ಕರ ಪ್ರಾರ್ಥಿಸಿದಾಗ ನನಗೆ ಇಲ್‌ಹಾಮ್ ಹೀಗೆ ಲಭಿಸಿತು: "ತೆರೆಯಲ್ಪಡುವುದು"

ನಾನು ಅವರಿಗೆ ಈ ವಿಷಯ ಪತ್ರ ಬರೆದು ತಿಳಿಸಿದೆ. ಕೇವಲ ಮೂರು ನಾಲ್ಕು ದಿನಗಳೊಳಗೆ ಅವರ ಸಂಪಾದನೆಯ ಮಾರ್ಗಗಳು ತೆರೆಯಲ್ಪಟ್ಟವು ಹಾಗೂ ಅವರ ಕಷ್ಟ ಪರಿಹರಿಸಲ್ಪಟ್ಟಿತು. ಅವರಿಗೆ ನನ್ನ ಬಗ್ಗೆ ವಿಶ್ವಾಸ ಬಲಿಷ್ಠವಾಯಿತು.

ಇನ್ನೊಮ್ಮೆ ನವಾಬ್ ಸಾಹೇಬರು ತನ್ನ ಕೆಲವು ವೈಯಕ್ತಿಕ ವಿಷಯಗಳ ಬಗ್ಗೆ ನನಗೆ ಪತ್ರ ಬರೆದರು. ಅವರು ತನ್ನ ಪತ್ರ ಅಂಚೆಗೆ ರವಾನಿಸಿದ ಕೂಡಲೆ ನನಗೆ ಇಲ್‌ಹಾಮ್ ಲಭಿಸಿತು. ನವಾಬ್ ಸಾಹೇಬರು ಇಂತಿಂತಹ ವಿಷಯದ ಬಗ್ಗೆ ಪತ್ರ ರವಾನಿಸಿದ್ದಾರೆ ಎಂದು. ನಾನು ಕೂಡಲೆ ನವಾಬ್ ಸಾಹೇಬರಿಗೆ ಬರೆದೆ: ನೀವು ನನಗೆ ಇಂತಿಂತಹ ವಿಷಯದ ಬಗ್ಗೆ ಬರೆದಿರುವಿರಿ. ನನ್ನ ಪತ್ರ ಮರುದಿನ ಅವರಿಗೆ ತಲಪಿದಾಗ ಅವರಿಗೆ ಅತ್ಯಾಶ್ಚರ್ಯವಾಯಿತು. ನನ್ನ ರಹಸ್ಯ ವಿಷಯ ಹೇಗೆ ತಿಳಿಯಿತು. ನನ್ನ ಹೊರತು ಬೇರೆ ಯಾರಿಗೂ ಇದರ ಬಗ್ಗೆ ತಿಳಿದಿಲ್ಲವಲ್ಲ ಎಂದು ಯೋಚಿಸಿದರು. ನವಾಬ್ ಸಾಹೇಬರ ಪ್ರೀತಿ ವಿಶ್ವಾಸಗಳು ಬಹಳ ವರ್ಧಿಸಿದುವು. ಅವರು ವಝೀರ್ ಸಯ್ಯದ್ ಮುಹಮ್ಮದ್ ಹಸನ್ ಸಾಹೇಬರನ್ನು ಭೇಟಿಯಾದಾಗ ಆಕಸ್ಮಿಕವಾಗಿ ನನ್ನ ಅಸಾಧಾರಣ ದೃಷ್ಟಾಂತಗಳ ಬಗ್ಗೆ ಚರ್ಚೆ ಮಾಡಿದರು. ಆಗ ನವಾಬ್ ಸಾಹೇಬರು ತನ್ನ ಜೇಬಿನಿಂದ ಒಂದು ಚಿಕ್ಕ ಮುಸ್ತಕ ತೆಗೆದು ವಝೀರ್ ಸಾಹೇಬರಿಗೆ ತೋರಿಸಿ ಹೇಳಿದರು: ನನ್ನ ನಂಬಿಕೆಯ ಕಾರಣ ಈ ಮುಸ್ತಕದಲ್ಲಿ ಬರೆದಿರುವ ಎರಡು ಭವಿಷ್ಯವಾಣಿಗಳ ಈಡೇರಿಕೆಯಾಗಿದೆ.

ನವಾಬ್ ಸಾಹೇಬರು ಮೃತರಾಗುವುದಕ್ಕೆ ಒಂದು ದಿನ ಮೊದಲು ನಾನು ಅವರನ್ನು ಸಂದರ್ಶಿಸಲು ಲುಧಿಯಾನಕ್ಕೆ ಹೋಗಿದ್ದೆ. ಅವರು ತನ್ನ ಮನೆಯ ಒಳಗಿನ ಕೋಣೆಯಿಂದ ಆ ಚಿಕ್ಕ ಮುಸ್ತಕ ತಂದು ಹೇಳಿದರು: "ನನಗೆ ಈ ಮುಸ್ತಕ ಓದುವಾಗ ಸಮಾಧಾನ ಲಭಿಸುತ್ತದೆ." ನಾನು ಪ್ರಸ್ತಾಪಿಸಿದ ಎರಡು ಭವಿಷ್ಯವಾಣಿಗಳನ್ನು ಬರೆದುದನ್ನು ಅವರು ನನಗೆ ತೋರಿಸಿದರು.'

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇನ್ನೊಂದು ಸಂಭವವನ್ನು ಹೀಗೆ ವಿವರಿಸಿದ್ದಾರೆ: 'ಮದರಾಸಿನ ವ್ಯಾಪಾರಿ ಸೇಠ್ ಅಬ್ದುರ್ರಹ್ಮಾನ್ ಸಾಹೇಬರು ಪ್ರಥಮ ಶ್ರೇಣಿಯ ನಿಷ್ಠಾವಂತರಾಗಿದ್ದಾರೆ. ಅವರು ಖಾದಿಯಾನಿಗೆ ಬಂದು ತನ್ನ ವ್ಯಾಪಾರದ ದುಸ್ಥಿತಿ ಬಗ್ಗೆ ಹೇಳಿ ತನಗೋಸ್ಕರ ಪ್ರಾರ್ಥಿಸಲು ವಿನಂತಿಸಿದರು.' ಆಗ ನನಗೆ ಹೀಗೆ ಇಲ್‌ಹಾಮ್ ಉಂಟಾಯಿತು. **'ಖಾದಿರ್ ಹೇ ಓಹ್ ಬಾರ್‌ಗಾಹ್, ಟೂಟಾ ಕಾಮ್ ಬನಾವೇ, ಬನಾ ಬನಾಯಾ ತೋಡ್‌ದೇ, ಕೋಯಿ ಉಸ್‌ಕಾ ಭೇದ್ ನ ಪಾವೇ'** ಅಂದರೆ, "ಮುರಿದು ಹೋದುದನ್ನು ಜೋಡಿಸಲು ಶಕ್ತನಾದವನು ಜೋಡಿಸಿದುದನ್ನು ಮುರಿಯಬಲ್ಲವನೂ ಆಗಿರುವನು. ಅವನ ರಹಸ್ಯ ಯಾರಿಗೂ ತಿಳಿಯಲಾಗದು."

ಈ ಇಲ್‌ಹಾಮಿನ ತಾತ್ಪರ್ಯವೇನೆಂದರೆ, ಅಲ್ಲಾಹನು ಮುರಿದು ಹೋದುದನ್ನು ಸರಿಪಡಿಸುವನು. ಅನಂತರ ಸ್ವಲ್ಪಕಾಲ ಕಳೆದ ಮೇಲೆ ಪುನಃ ಅದನ್ನು ಮುರಿದು ಹಾಕುವನು ಎಂದಾಗಿದೆ.

ಈ ಇಲ್‌ಹಾಮನ್ನು ಸೇಠ್ ಸಾಹೇಬರಿಗೆ ವಿವರಿಸಿ ಕೊಡಲಾಯಿತು. ಅವರ ವ್ಯಾಪಾರ ಸ್ವಲ್ಪ ಕಾಲ ವಿಜೃಂಭಿಸಿತು. ಆ ಮೇಲೆ ಅದು ನಷ್ಟದಲ್ಲಿ ಕೊನೆಗೊಂಡಿತು.

ಮತ್ತೊಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಬರೆದಿದ್ದಾರೆ: "ಎರಡು ರೋಗಗಳು ನನ್ನನ್ನು ದೀರ್ಘಕಾಲದಿಂದ ಬಾಧಿಸುತ್ತಿದ್ದುವು. ಒಂದನೆಯ ರೋಗ ಅತಿ ಕಠಿಣವಾದ ತಲೆ ನೋವಾಗಿತ್ತು. ಅಂದಾಜು ಇಪ್ಪತ್ತೈದು ವರ್ಷಗಳ ಕಾಲ ಈ ರೋಗ ನನ್ನನ್ನು ಬಾಧಿಸುತ್ತಿತ್ತು. ಇದರೊಂದಿಗೆ ತಲೆ ಸುತ್ತುವ ರೋಗವೂ ಇತ್ತು. ಈ ರೋಗಗಳ ಕೊನೆಯ ಪರಿಣಾಮ ಮೂರ್ಛೆ ರೋಗವೆಂದು ವೈದ್ಯ ಶಾಸ್ತ್ರಜ್ಞರು ಬರೆದಿದ್ದಾರೆ. ನನ್ನ ಅಣ್ಣ ಮಿರ್ಝಾ ಗುಲಾಮ್ ಖಾದಿರ್ ಅಂದಾಜು ಎರಡು ತಿಂಗಳುಗಳ ಕಾಲ ಈ ರೋಗದಿಂದ ಬಾಧಿತನಾದ ನಂತರ ಮೂರ್ಛೆ ರೋಗಕ್ಕೆ ತುತ್ತಾದರು. ಆ ರೋಗದಿಂದಲೇ ಅವರು ಮೃತರಾದರು. ನನ್ನನ್ನು ಈ ರೋಗದಿಂದ ರಕ್ಷಿಸಲು ನಾನು ಅಲ್ಲಾಹನೊಡನೆ ಪ್ರಾರ್ಥಿಸುತ್ತಾ ಇದ್ದೆ. ಒಮ್ಮೆ ನಾನು ಒಂದು

ದಿವ್ಯದರ್ಶನ(ಕಶ್ಫ್) ಕಂಡೆನು. ಒಂದು ಕಪ್ಪು, ನಾಲ್ಕು ಕಾಲಿನ, ತೋಳದಷ್ಟು ಎತ್ತರದ ಪ್ರಾಣಿ, ನನ್ನನ್ನು ಆಕ್ರಮಿಸಲು ಬಂದಿತು. ಅದರ ಮೈಯಲ್ಲಿ ನೀಳವಾದ ಕೂದಲುಗಳು ಇತ್ತು ಮತ್ತು ಅದು ದೊಡ್ಡ ದೊಡ್ಡ ಪಂಜಗಳನ್ನು ಹೊಂದಿತ್ತು. ಇದು ಮೂರ್ಛೆರೋಗ ಎಂದು ನನ್ನ ಹೃದಯಕ್ಕೆ ತಿಳಿಸಲಾಯಿತು. ನಾನು ನನ್ನ ಬಲಗೈಯಿಂದ ಬಿರುಸಾಗಿ ಆ ಪ್ರಾಣಿಯ ಎದೆಗೆ ಹೊಡೆದೆ ಮತ್ತು ಹೇಳಿದೆ– 'ದೂರ ಸರಿದು ಹೋಗು, ನನ್ನಲ್ಲಿ ನಿನ್ನ ಪಾಲು ಇಲ್ಲ.'

ಈ ದಿವ್ಯದರ್ಶನ ಕಂಡ ನಂತರ ನನ್ನ ಆ ಕಠಿಣವಾದ ತಲೆನೋವು ಕ್ರಮೇಣ ನಿಂತು ಹೋಯಿತು. ಆದರೆ ಒಮ್ಮೊಮ್ಮೆ ತಲೆ ಸುತ್ತು ಮಾತ್ರ ಬರುತ್ತದೆ. ಎರಡು ಹಳದಿ ಚಾದರುಗಳ ಭವಿಷ್ಯವಾಣಿಗೆ ಅಡ್ಡಿಯಾಗದಿರಲಿಕ್ಕಾಗಿ ಹೀಗೆ ಆಗಿದೆ. (ಮಸೀಹ್ ಮೌಊದರ ಚಿಹ್ನೆಯಾಗಿ ಎರಡು ಹಳದಿ ಚಾದರುಗಳ ಬಗ್ಗೆ ಭವಿಷ್ಯವಾಣಿಗಳಿವೆ. ಅವುಗಳ ಉದ್ದೇಶ ಎರಡು ರೋಗಗಳಾಗಿವೆ. ಒಂದನೆಯ ರೋಗ ತಲೆಸುತ್ತುವುದಾಗಿದೆ.)

ನನಗಿರುವ ಎರಡನೆಯ ರೋಗ ಮಧುಮೇಹವಾಗಿದೆ. ಅದು ಇಪ್ಪತ್ತು ವರ್ಷಗಳಿಂದ ಇದೆ. ಈ ಚಿಹ್ನೆಯ ಬಗ್ಗೆ ಇದರ ಮೊದಲು ಸಹ ವಿವರಿಸಿದ್ದೇನೆ. ನಾನು ಮಧುಮೇಹದ ದುಷ್ಪರಿಣಾಮಗಳ ಬಗ್ಗೆ ಡಾಕ್ಟರುಗಳ ಅನುಭವದ ಪ್ರಕಾರ ಯೋಚಿಸುತ್ತಿದ್ದೆ. ಆಗ ನನಗೆ ಇಲ್‌ಹಾಮ್ ಲಭಿಸಿತು– **'ನಝಲತಿರ್‍ರಹ್ಮತ ಅಲಾ ಸಲಾಸಿಲ್ ಐನಿ ವ ಅಲಲ್ ಆಖರೀನ್'** ಅಂದರೆ 'ಮೂರು ಅಂಗಗಳ ಮೇಲೆ ಅನುಗ್ರಹ ನೀಡಲಾಗಿದೆ. ಕಣ್ಣು ಮತ್ತು ಇನ್ನೆರಡು ಅಂಗಗಳಿಗೆ.' ನಂತರ, ಮಧುಮೇಹ ರೋಗಿಗಳಿಗೆ ಸಂಭವಿಸುವ ಕಾರ್ಬಂಕಲ್(ರಾಜಕುರು) ಬಗ್ಗೆ ನನಗೆ ಯೋಚನೆ ಬಂದಾಗ ಹೀಗೆ ಇಲ್‌ಹಾಮ್ ಲಭಿಸಿತು– '**ಅಸ್ಸಲಾಮು ಅಲೈಕುಮ್**'. ಹಾಗೆ, ನಾನು ದೀರ್ಘಕಾಲದಿಂದ ಈ ವಿಪತ್ತುಗಳಿಂದ ರಕ್ಷಿಸಲ್ಪಟ್ಟಿರುವೆನು.

ಹಝ್ರತ್ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ರೋಗಗ್ರಸ್ತರಾದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ವಿವರಿಸಿರುವರು. ಮೌಲವಿ ಸಾಹೇಬರು ಮೃತರಾದಾಗ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರಿಗೆ ಬಹಳ ದುಃಖವಾದ ಬಗ್ಗೆ ಹಿಂದಿನ ಖುತುಬದಲ್ಲಿ ನಾನು ವಿವರಿಸಿದ್ದೇನೆ. ಮೌಲವಿ ಸಾಹೇಬರಿಗೆ ಜಮಾಅತಿನಲ್ಲಿ ಬಹಳ ಉನ್ನತ ಸ್ಥಾನವಿತ್ತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮೌಲವಿ ಸಾಹೇಬರಿಗೋಸ್ಕರ ಪ್ರಾರ್ಥಿಸುತ್ತಾ ಇದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳುತ್ತಾರೆ:

'1905 ಅಕ್ಟೋಬರ್ ತಿಂಗಳು 11ರಂದು ನಮ್ಮ ಪ್ರಿಯ ಸ್ನೇಹಿತ ಮೌಲವಿ ಅಬ್ದುಲ್ ಕರೀಮ್ ಸಾಹೇಬರು ಕಾರ್ಬಂಕಲ್‌ನಿಂದ ಬಾಧಿತರಾಗಿ ಮೃತರಾದರು. ನಾನು ಅವರಿಗೋಸ್ಕರ ಬಹಳ ಪ್ರಾರ್ಥಿಸಿದ್ದೆ. ಆದರೆ, ನನಗೆ ಲಭಿಸಿದ ಇಲ್‌ಹಾಮ್‌ಗಳು ಸಮಾಧಾನಕರವಾಗಿರಲಿಲ್ಲ. ಪದೇ ಪದೇ ನನಗೆ ಹೀಗೆ ಇಲ್‌ಹಾಮ್ ಲಭಿಸುತ್ತಿತ್ತು. **'ಕಫನ್ ಮೇ ಲಪೇಟಾಗಯಾ'** 'ಕಫನ್ ಹೊದಿಸಲಾಯಿತು' ಎಂದು. ಅವರ ಪ್ರಾಯ 47 ವರ್ಷವಾಗಿತ್ತು. إِنَّا لِلّٰهِ وَإِنَّا إِلَيْهِ رَاجِعُونَ. **'ಇನ್ನಲ್ ಮನಾಯಾ ಲಾ ತತೀಶು ಸಿಹಾಮುಹಾ.'** ಅಂದರೆ, 'ಮೃತ್ಯುವಿನ ಬಾಣಗಳು ಗುರಿತಪ್ಪುವುದಿಲ್ಲ.'

ಈ ಇಲ್‌ಹಾಮ್ ಲಭಿಸಿದ ನಂತರ ಸಹ ಪ್ರಾರ್ಥನೆ ಮಾಡಿದಾಗ ಹೀಗೆ ಇಲ್‌ಹಾಮ್ ಉಂಟಾಯಿತು:

**ಯಾ ಅಯ್ಯುಹನ್ನಾಸುಅ್‌ಬುದೂ ರಬ್ಬಕುಮುಅಲ್ಲಝೀ ಖಲಖಕುಮ್ ತೂಸೀರೂನಲ್ ಹಯಾತದ್ದುನ್‌ಯಾ.**

'ಓ ಜನರೇ ನಿಮ್ಮನ್ನು ಸೃಷ್ಟಿಸಿದ ದೇವನನ್ನು ನೀವು ಆರಾಧಿಸಿರಿ. ಏನು ನೀವು ಲೌಕಿಕ ಜೀವಿತಕ್ಕೆ ಆದ್ಯತೆ ನೀಡುತ್ತಿರುವಿರೇನು.?'

ಈ ಇಲ್‌ಹಾಮ್ ಹೀಗೆ ಸೂಚಿಸುತ್ತಿತ್ತು. ಒಬ್ಬ ವ್ಯಕ್ತಿಯ ಜೀವಿತದ ಬಗ್ಗೆ ಅದು ಅತ್ಯಾವಶ್ಯಕವೆಂದೂ ಅವನ ಮೃತ್ಯುವಿನಿಂದ ಹಾನಿ ಉಂಟಾಗುವುದೆಂದೂ ಭಾವಿಸುವುದು ಒಂದು ರೀತಿಯ ಶಿರ್ಕ್ ಆಗಿದೆ. (ದೇವನಿಗೆ ಸಹಭಾಗಿತ್ವ ಕಲ್ಪಿಸುವುದಾಗಿದೆ).

ಈ ಇಲ್‌ಹಾಮ್ ದೊರೆತನಂತರ ನಾನು ಮೌನವನ್ನು ಅವಲಂಭಿಸಿದೆ. ಮೃತ್ಯು ಖಂಡಿತವಾಗಿ ಸಂಭವಿಸುವುದು ಎಂದು ನಾನು ತಿಳಿದೆ. ಹಾಗೆ, ಮೌಲವಿ ಸಾಹೇಬರು 1905, ಅಕ್ಟೋಬರ್ ಹನ್ನೊಂದನೆ ದಿನಾಂಕ ನಿಧನ ಹೊಂದಿದರು.

ಆದರೆ ನಾನು ನೋವಿನಿಂದ ಭರಿತನಾಗಿ ಮಾಡಿದ ಪ್ರಾರ್ಥನೆಗಳನ್ನು ಅಲ್ಲಾಹನು ಮರೆತು ಬಿಡಲಿಲ್ಲ. ಅವನು ನನಗೆ ಉಂಟಾದ ಸೋಲನ್ನು ಇನ್ನೊಂದು ಜಯ ನೀಡಿ ಪರಿಹರಿಸಿದನು. ಅದಕ್ಕೋಸ್ಕರ ಸೇಠ್ ಅಬ್ದುರ್ರಹ್ಮಾನರನ್ನು ಆಯ್ಕೆ ಮಾಡಿದನು. ಅಲ್ಲಾಹನು ಅಬ್ದುಲ್ ಕರೀಮರನ್ನು ನಮ್ಮಿಂದ ತೆಗೆದುಕೊಂಡು ಅಬ್ದುರ್ರಹ್ಮಾನರನ್ನು ನಮಗೆ ಬಿಟ್ಟು ಕೊಟ್ಟನು. ಅಬ್ದುರ್ರಹ್ಮಾನ್‌ರಿಗೆ ಅದೇ ರೋಗ ಬಾಧಿಸಿತ್ತು. ಅವರಿಗೋಸ್ಕರ ನಾನು ಮಾಡಿದ ನನ್ನ ಪ್ರಾರ್ಥನೆಯನ್ನು ಅಲ್ಲಾಹನು ಅಂಗೀಕರಿಸಿ ಅವರನ್ನು ರೋಗ ಮುಕ್ತರನ್ನಾಗಿ ಮಾಡಿದನು– **ಫಲ್‌ಹಮ್‌ದುಲಿಲ್ಲಾಹಿ ಅಲಾ ದಾಲಿಕ್.**''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ''ನನಗೆ ನೂರಾರು ಸಾರಿ ಅನುಭವಕ್ಕೆ ಬಂದಿದೆ. ಅಲ್ಲಾಹನು ಎಂತಹ ದಯಾಳುವಾಗಿದ್ದಾನೆಂದರೆ ನಮ್ಮ ಒಂದು ಪ್ರಾರ್ಥನೆಯನ್ನು ತನ್ನದೇ ಆದ ಕಾರಣದಿಂದ ಅಂಗೀಕರಿಸದೆ ಇರುವಾಗ ಅದಕ್ಕೆ ಬದಲಾಗಿ ಬೇರೆ ಒಂದು ಪ್ರಾರ್ಥನೆ ಅಂಗೀಕರಿಸುತ್ತಾನೆ.''

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಾರ್ಥನೆಯ ಅಂಗೀಕಾರದ ವಿಧಾನವನ್ನು ಸಹ ಇಲ್ಲಿ ನಮಗೆ ತಿಳಿಸಿ ಕೊಟ್ಟಿದ್ದಾರೆ. ಕೆಲವರು ಹೇಳುತ್ತಾರೆ: ನಮ್ಮ ಪ್ರಾರ್ಥನೆಗಳು ಅಂಗೀಕರಿಸಲ್ಪಡುವುದಿಲ್ಲ ಎಂದು. ಕೆಲವು ಸಾರಿ ಪ್ರವಾದಿಗಳ ಪ್ರಾರ್ಥನೆ ಸಹ ಅಲ್ಲಾಹನ ವಿಧಿ ಪ್ರಕಾರ ಅಂಗೀಕಾರಗೊಳ್ಳುವುದಿಲ್ಲ. ಆದರೆ ಮಾಡಲಾದ ಪ್ರಾರ್ಥನೆಗೆ ಬದಲಾಗಿ ಬೇರೆ ಒಂದು ಪ್ರಾರ್ಥನೆ ಅಂಗೀಕರಿಸಲ್ಪಡುತ್ತದೆ. ಅಂಗೀಕರಿಸಲ್ಪಡುವ ಪ್ರಾರ್ಥನೆ ಅಂಗೀಕಾರ ಪಡೆಯದ ಪ್ರಾರ್ಥನೆಯ ಹಾಗೆಯೇ ಇರುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಸತ್ಯತೆಗೆ ಸಾಕ್ಷ್ಯಾಧಾರವಾಗಿ ಪವಿತ್ರ ಖುರ್‌ಆನಿನ ಭವಿಷ್ಯವಾಣಿಗಳಲ್ಲಿ ಒಂದರ ಬಗ್ಗೆ ಹೀಗೆ ಬರೆದಿದ್ದಾರೆ:

''ಮಸೀಹ್ ಮೌಊದರ ಆಗಮನದ ಒಂದು ಮುಖ್ಯ ಚಿಹ್ನೆ ಒಂದು ಹೊಸ ಸಂಚಾರ ವಿಧಾನ ಜಾರಿಗೊಳ್ಳುವುದಾಗಿದೆ. ಪವಿತ್ರ ಖುರ್‌ಆನ್‌ನಲ್ಲಿ ಇದರ ಬಗ್ಗೆ ಸೂಚನೆಯಿದೆ. **ವ ಇಝುಲ್ ಇಶಾರು ಉತ್ತಿಲತ್** 'ಲೋಕದ ಅಂತಿಮ ಕಾಲಘಟ್ಟದಲ್ಲಿ

ಒಂಟೆಗಳು ನಿಷ್ಪ್ರಯೋಜಕವಾಗಿ ತ್ಯಜಿಸಲ್ಪಡುವುವು' ಎಂದು ಪವಿತ್ರ ಖುರ್‌ಆನ್‌ನಲ್ಲಿ ಭವಿಷ್ಯವಾಣಿ ಇದೆ. 'ಮುಸ್ಲಿಮ್' ಎಂಬ ಹದೀಸು ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. **ವ ಲಯತ್‌ರಕುನ್ನಲ್ ಖಲಾಸ ಫಲಾ ಯಸ್‌ಆ ಅಲೈಹಾ.** ಆ ಕಾಲದಲ್ಲಿ ಒಂಟೆಗಳು ನಿಷ್ಪ್ರಯೋಜಕವಾಗುವುವು. ಅದರ ಮೇಲೆ ಸವಾರಿ ಮಾಡಿ ಯಾರೂ ದೂರ ಸಂಚಾರ ಮಾಡಲಾರರು. ಹಜ್ ಕಾಲದಲ್ಲಿ ಮಕ್ಕದಿಂದ ಮದೀನಕ್ಕೆ ಒಂಟೆಯ ಮೇಲೆ ಸವಾರಿ ಮಾಡಿ ಪ್ರಯಾಣ ಮಾಡುತ್ತಾರೆ. ಆದರೆ ಈಗ ರೈಲು ಬಂಡಿಯನ್ನು ಬಳಸುವ ಕಾಲ ಬೇಗನೆ ಬರಲಿದೆ. ಆಗ ಈ ಭವಿಷ್ಯವಾಣಿ ಈಡೇರುವುದು ಪ್ರತ್ಯಕ್ಷವಾಗುವುದು.

(ನಂತರ ಹಝ್ರತ್ ಖಲೀಫತುಲ್ ಮಸೀಹ್‌ರವರು ಅಬ್ದುಲ್ಲಾ ಆಥಮ್‌ಗೆ ಸಂಬಂಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಭವಿಷ್ಯವಾಣಿಗಳನ್ನು ಸವಿಸ್ತಾರವಾಗಿ ವಿವರಿಸಿದರು.) ನಂತರ ಹೇಳಿದರು:

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಪವಿತ್ರ ಖುರ್‌ಆನಿನ ಅನುಗ್ರಹಗಳು ಮನುಷ್ಯನ ಶಕ್ತಿಗಳಿಂದ ಬಹಳ ಉನ್ನತವಾಗಿರುವವುಗಳಾಗಿವೆ. ನಂಬುವವರಿಗೆ ಬಹಳ ವಿಚಿತ್ರ ದೃಷ್ಟಾಂತಗಳನ್ನು ಪ್ರಕಟಿಸಿ ದೃಢವಾದ ಜ್ಞಾನ ನೀಡುತ್ತದೆ. ಅದರ ಅನುಗ್ರಹದಿಂದ ದೃಷ್ಟಾಂತಗಳು ಪವಾಡಗಳು ಪ್ರಕಟಗೊಳ್ಳುತ್ತವೆ. ಪವಿತ್ರ ಖುರ್‌ಆನಿನ ಅನುಗ್ರಹಗಳನ್ನು ನಾನು ಕಥೆಯ ರೂಪದಲ್ಲಿ ಹೇಳುತ್ತಾ ಇಲ್ಲ. ಸ್ವತಃ ನನಗೆ ತೋರಿಸಲಾದ ದೃಷ್ಟಾಂತಗಳನ್ನು ವಿವರಿಸುತ್ತೇನೆ. ಅವುಗಳು ಒಂದು ಲಕ್ಷಕ್ಕಿಂತ ಹೆಚ್ಚೇ ಇವೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: ನನ್ನ ಈ ಗ್ರಂಥವನ್ನು ಅನುಸರಿಸುವವನು ಈ ಗ್ರಂಥದ ಅದ್ಭುತ ಕೃತ್ಯಗಳನ್ನು ನಂಬುವನಲ್ಲದೆ ಅವನಿಗೆ ಸಹ ಅದ್ಭುತ ಕೃತ್ಯಗಳು ನೀಡಲ್ಪಡುವುವು. ಸ್ವತಃ ನಾನು ಪವಿತ್ರ ಖುರ್‌ಆನಿನ ಪ್ರಭಾವದಿಂದ ಮನುಷ್ಯ ಶಕ್ತಿಗೆ ಅತೀತವಾದ ಮತ್ತು ಕೇವಲ ಅಲ್ಲಾಹನ ಅನುಗ್ರಹದಿಂದ ಲಭಿಸುವ ಅದ್ಭುತ ದೃಷ್ಟಾಂತಗಳನ್ನು ಪಡೆದಿರುವೆನು. ಭೂಮಿಯಲ್ಲಿ ಸಂಭವಿಸಿದ ಭೂಕಂಪಗಳು, ಜನರನ್ನು ತಿಂದು ಹಾಕುವ ಪ್ಲೇಗು, ಇಂತಹ ದೃಷ್ಟಾಂತಗಳಲ್ಲಿ ಸೇರಿವೆ. ನಾನು ಈ ವಿಪತ್ತುಗಳನ್ನು ಹೆಸರಿಸಿ ಇಪ್ಪತ್ತೈದು ವರ್ಷಗಳ ಹಿಂದೆ ನನ್ನ ಗ್ರಂಥವಾದ **'ಬರಾಹೀನೆ ಅಹ್ಮದಿಯಾ'**ದಲ್ಲಿ ಭವಿಷ್ಯವಾಣಿಯ ರೂಪದಲ್ಲಿ ಬರೆದು ಪ್ರಕಟಿಸಿದ್ದೆ. ಈ ವಿಪತ್ತುಗಳು ಬರಲಿವೆ ಎಂದು ನಾನು ಬರೆದಿದ್ದೆ. ಇನ್ನು ಮುಂದೆ ಬರಲಿರುವ ವಿಪತ್ತುಗಳು ಈ ವಿಪತ್ತುಗಳಿಗಿಂತ ಬಹಳ ಹೆಚ್ಚು ತೀವ್ರವಾಗಿರುವುವು. ಒಂದು ಭಯಾನಕ ರೀತಿಯ ಪ್ಲೇಗ್ ರೋಗ ಪ್ರಕಟವಾಗಲಿದೆ. ಅದು ಈ ದೇಶದಲ್ಲೂ ಬೇರೆ ದೇಶಗಳಲ್ಲೂ ಪ್ರಕಟವಾಗುವುದು ಮತ್ತು ಅತ್ಯಂತ ಗಾಬರಿದಾಯಕವಾಗುವುದು."

ಈಗ ಲೋಕದ ಜನರು ಮಾಡುತ್ತಿರುವ ಕೆಲಸಗಳು ಹೇಗಿವೆ ಎಂದರೆ ಅವರು ಅಲ್ಲಾಹನಿಂದ ದೂರ ಸರಿದು ಹೋಗುತ್ತಿದ್ದಾರಲ್ಲದೆ ದೌರ್ಜನ್ಯ ಸಹ ಮಾಡುತ್ತಿದ್ದಾರೆ. ಅವರು ಮಾಡುವ ಕೆಲಸಗಳು ವಿಪತ್ತುಗಳನ್ನು ಸ್ವತಃ ಬೇಗನೆ ಬರುವಂತೆ ಕರೆಯುತ್ತಿವೆ. ಅಲ್ಲಾಹನು ದಯೆದೋರಲಿ. ಅಹ್ಮದಿಯರಿಗೆ ಪ್ರಾರ್ಥಿಸುವ ಭಾಗ್ಯವನ್ನು ಅಲ್ಲಾಹನು ದಯಪಾಲಿಸಲಿ. ನಮ್ಮ ಕೆಲಸಗಳನ್ನು ಸರಿಯಾಗಿ ಮಾಡುವ ಭಾಗ್ಯ ಅಲ್ಲಾಹನು ನಮಗೆ ಅನುಗ್ರಹಿಸಲಿ. ಮುಸ್ಲಿಮ್ ದೇಶಗಳ ಸ್ಥಿತಿ ಹೇಗಿದೆ ಎಂದರೆ ಮುಸ್ಲಿಮರು ಅಲ್ಲಾಹನಿಂದ ದೂರ ಸರಿದು ಹೋಗುತ್ತಿದ್ದಾರೆ. ಅಲ್ಲಾಹನ ಕಡೆಗೆ ಕರೆ ನೀಡುವ ಮಹಾನುಭಾವರನ್ನು ನಿಂದಿಸಿ ಅಪಹಾಸ್ಯ ಮಾಡುತ್ತಿದ್ದಾರೆ. ಇವರು ಅವ್ಯವಸ್ಥೆ ಹಬ್ಬಿಸುವವರು ಮತ್ತು ಆತಂಕ ಹಬ್ಬಿಸಲು ಪ್ರಯತ್ನ ಮಾಡುವವರು ಎಂದು ಆರೋಪ ಹೊರಿಸುತ್ತಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಅಲ್ಲಾಹನು ತನ್ನ ಪ್ರತಿನಿಧಿಯನ್ನು ಕಳುಹಿಸಿ ಮೃದು ಶಬ್ದಗಳಿಂದ ಜನರನ್ನು ಕರೆದು ಮಾರ್ಗದರ್ಶನ ನೀಡುತ್ತಾನೆ. ಇನ್ನೊಂದು ಕಡೆ ಜ್ಞಾನದ ಅಭಿವೃದ್ಧಿ ಮಾರ್ಗ ತೆರೆದಿದ್ದಾನೆ. ಜನರಿಗೆ ಸತ್ಯವನ್ನು ತಿಳಿಸಲು ಆಕಾಶ ದೃಷ್ಟಾಂತಗಳನ್ನು ತೋರಿಸುತ್ತಿದೆ."

ಅನೇಕ ದೃಷ್ಟಾಂತಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕಾಲದಲ್ಲಿ ಕಾಣಿಸಿದುವು. ಚಂಡಮಾರುತಗಳು, ಸೂರ್ಯ ಚಂದ್ರ ಗ್ರಹಣಗಳು, ಭೂಕಂಪಗಳು ಸಂಭವಿಸಿದುವು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಕ್ರೋಧ ಪ್ರಕಟಿಸುವ ದೃಷ್ಟಾಂತಗಳು ಸಹ ಕಾಣಿಸಿದವು. ಅವುಗಳಲ್ಲಿ ಪ್ಲೇಗ್ ರೋಗ ಒಂದಾಗಿದೆ." ಅದು ಎಷ್ಟು ಭೀಕರವಾಗಿತ್ತೆಂದರೆ ಅವರ ಹಿಂದಿನ ಪೀಳಿಗೆಗಳು ಅದನ್ನು ಕಂಡಿರಲಾರದು.

ಅನೇಕ ಜನರು ಈ ದೃಷ್ಟಾಂತಗಳಿಂದ ಲಾಭ ಪಡೆಯುತ್ತಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಾದಗಳನ್ನು ಮನವರಿಕೆ ಮಾಡುತ್ತಾರೆ ಮತ್ತು ಅಂಗೀಕರಿಸುತ್ತಾರೆ. ಪ್ರತಿಯೊಂದು ವರ್ಗದಲ್ಲಿ, ಪ್ರತಿಯೊಂದು ದೇಶದಲ್ಲಿ ಇಂತಹ ಜನರಿದ್ದಾರೆ. ಅಲ್ಲಾಹನ ಅನುಗ್ರಹದಿಂದ ನೂರಾರು, ಸಾವಿರಾರು ಮಾತ್ರವಲ್ಲ ಲಕ್ಷಾಂತರ ಜನರು ಅಹ್ಮದಿಯಾ ಜಮಾಅತಿಗೆ ಸೇರುತ್ತಿದ್ದಾರೆ.

ಒಂದೆಡೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ನೆನಪಿಡಿರಿ, ಅಲ್ಲಾಹನು ಈ ಜಮಾಅತನ್ನು ನಾಶಗೊಳಿಸಲಾರನು. ಅಲ್ಲಾಹನು ನುಡಿದ ಭವಿಷ್ಯವಾಣಿ **ಬರಾಹೀನೆ ಅಹ್ಮದಿಯಾ** ಗ್ರಂಥದಲ್ಲಿ ಹೀಗೆ ಬರೆಯಲಾಗಿದೆ. **ದುನ್‌ಯಾಮೇ ಏಕ್ ನಝೀರ್ ಆಯಾ ಪರ್ ದುನ್‌ಯಾನೆ ಉಸ್‌ಕೋ ಖಬೂಲ್ ನ ಕಿಯಾ ಲೇಕಿನ್ ಖುದಾ ಉಸೇ ಖಬೂಲ್ ಕರೇಗಾ ಔರ್ ಬಡೇ ಝೋರ್ ಆವರ್ ಹಮ್‌ಲೋಂಸೆ ಉಸ್ ಕೀ ಸಚ್ಚಾಯಿ ಝಾಹಿರ್ ಕರೇಗಾ.** (ಲೋಕದಲ್ಲಿ ಒಬ್ಬ ಮುನ್ನೆಚ್ಚರಿಕೆಗಾರ ಆಗಮಿಸಿದನು. ಆಗ ಲೋಕ ಅವನನ್ನು ಅಂಗೀಕರಿಸಲಿಲ್ಲ ಆದರೆ ಅಲ್ಲಾಹನು ಅವನನ್ನು ಅಂಗೀಕರಿಸುವನು ಮತ್ತು ಬಹಳ ತೀವ್ರವಾದ ಆಕ್ರಮಣಗಳಿಂದ ಅವನ ಸತ್ಯತೆಯನ್ನು ಪ್ರಕಟಗೊಳಿಸುವನು.)

ಯಾರು ನಿರಾಕರಿಸಿದರೋ ಮತ್ತು ಯಾರು ನಿರಾಕರಿಸಲು ಸನ್ನದ್ಧರಾದರೋ ಅವರಿಗೆ ಹೀನಾಯಸ್ಥಿತಿ ಮತ್ತು ಅಪಮಾನ ನಿರ್ಧರಿಸಲ್ಪಟ್ಟಿದೆ. ನನ್ನ ವಾದ ಸುಳ್ಳಾಗಿದ್ದರೆ ಹಾಗೆ ಸುಳ್ಳಾಗಿ ವಾದಿಸುವವನು ಎಂದೋ ನಾಶವಾಗಿ ಹೋಗುತ್ತಿದ್ದನು ಎಂದು ಈ ಜನರು ಯೋಚಿಸುವುದಿಲ್ಲ. ಅಲ್ಲಾಹನು ಸುಳ್ಳುವಾದಿಯ ಎಂತಹ ಶತ್ರುವಾಗಿದ್ದಾನೆಂದರೆ ಬೇರೆ ಯಾರ ಮೇಲೆಯೂ ಅವನಷ್ಟು ಹೆಚ್ಚು ಶತ್ರುತ್ವ ಹೊಂದಿಲ್ಲ. ನನ್ನ ಇಷ್ಟಕ್ಕೋಸ್ಕರ ತಮ್ಮ ಸ್ವಂತ ಇಷ್ಟವನ್ನು ತ್ಯಜಿಸುವವರೇ ನನ್ನೊಂದಿಗೆ ಇರುವವರಾಗಿದ್ದಾರೆ. ಅವರು ತಮ್ಮ ಸ್ವಾರ್ಥವನ್ನು ತ್ಯಜಿಸಿ ನನ್ನನ್ನು

**ಹಕಮ್** (ನ್ಯಾಯಾದೀಶ) ಎಂದು ಅಂಗೀಕರಿಸುತ್ತಾರೆ. ನಾನು ದೃಷ್ಟಾಂತಗಳ ಬಗ್ಗೆ ಬಹಳ ಹೆಚ್ಚು ಬರೆದಿರುವೆನು ಎಂದು ಭಾವಿಸುತ್ತೇನೆ. ಈ ಮಾತುಗಳು ಸತ್ಯ ಎಂದು ಅಲ್ಲಾಹನು ತಿಳಿದವನಾಗಿದ್ದಾನೆ. ಮನುಷ್ಯನ ಶಕ್ತಿಗೆ ಅತೀತವಾದ ಮೂರು ಸಾವಿರಕ್ಕಿಂತ ಹೆಚ್ಚು ಕಾರ್ಯಗಳನ್ನು ಅಲ್ಲಾಹನು ನನಗೋಸ್ಕರ ಪ್ರಕಟಿಸಿದ್ದಾನೆ. ಇನ್ನು ಮುಂದೆ ಸಹ ಅವುಗಳು ಪ್ರಕಟವಾಗುವ ಬಾಗಿಲು ತೆರೆದಿದೆ.''

ಅಲ್ಲಾಹನು ಲೋಕದ ಜನರಿಗೆ ಬುದ್ಧಿ ನೀಡಲಿ. ಅವರು ದೃಷ್ಟಾಂತಗಳನ್ನು ಮನವರಿಕೆ ಮಾಡುವವರಾಗಲಿ. ಅವರು ತಮ್ಮ ಬುದ್ಧಿ ಮತ್ತು ಇಚ್ಛೆಗೆ ಅನುಸಾರವಾಗಿ ದೃಷ್ಟಾಂತಗಳನ್ನು ಆವಶ್ಯಪಡುವವರಾಗದಿರಲಿ. ಈ ಕಾಲಘಟ್ಟದ ಆವಶ್ಯಕತೆ ಮತ್ತು ಈ ಕಾಲಘಟ್ಟದ ಧ್ವನಿ ಮತ್ತು ಈ ಕಾಲಘಟ್ಟದ ಸ್ಥಿತಿ, ಅಲ್ಲಾಹನು ಕಳುಹಿಸುವ ಒಬ್ಬನನ್ನು ಆವಶ್ಯಪಡುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಂಡು ಅದನ್ನು ಆಲಿಸುವವರಾಗಲಿ. ಅದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವವರಾಗಲಿ. ಅಲ್ಲಾಹನು ಕಳುಹಿಸಿದವನನ್ನು ಹುಡುಕಿ ನಂಬುವವರಾಗಲಿ. ಆ ಮೂಲಕ ಲೋಕದಿಂದ ಅಸ್ತವ್ಯಸ್ತತೆ ಅಂತ್ಯಗೊಳ್ಳಲಿ- ಆಮೀನ್.

ಇಂದು ಒಂದು ನಮಾಝೆ ಜನಾಝ ಗಾಯಿಬ್ ಅನುಷ್ಠಿಸಲಿಕ್ಕಿದೆ. ಗುಲಾಮ್ ಖಾದಿರ್ ಸಾಹೇಬ್ ಇಬ್ನು ಅಬ್ದುಲ್ ಗಫ್ಫಾರ್ ಸಾಹೇಬ್. ಖಾದಿಯಾನಿನ ದರ್‌ವೇಶ್ ಆಗಿದ್ದ ಅವರು ನವಂಬರ್ 12ರಂದು 90 ವರ್ಷ ಪ್ರಾಯದಲ್ಲಿ ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ ಅವರು ಖಾದಿಯಾನಿನ ರಕ್ಷಣೆಗೆ 1947ರಲ್ಲಿ ನಿಯುಕ್ತರಾದ 313 ದರ್ವೇಶ್‌ಗಳಲ್ಲಿ ಒಬ್ಬರಾಗಿದ್ದರು. ದರ್ವೇಶ್‌ಗಳ ಪಟ್ಟಿಯಲ್ಲಿ ಅವರ ನಂಬರ್ 189 ಆಗಿದೆ. 1925ರಲ್ಲಿ ಈಗ ಪಾಕಿಸ್ತಾನದಲ್ಲಿರುವ ಗುಜರಾತಿನ ಶಾದಿವಾಲ್‌ನಲ್ಲಿ ಜನಿಸಿದರು. ಅವರು ಸೈನ್ಯದಲ್ಲಿ 4ವರ್ಷ ಸೇವೆ ಸಲ್ಲಿಸಿದ್ದಾರೆ. 1947ರಲ್ಲಿ ಸೈನ್ಯ ಬಿಟ್ಟು ಖಾದಿಯಾನಿನ ರಕ್ಷಣೆಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಇಚ್ಛೆ ಪ್ರಕಾರ ಆಗಮಿಸಿದರು. ಅವರು ಸಿಖ್ಖರಿಗೆ ತಬ್ಲೀಗ್ ಮಾಡುತ್ತಿದ್ದರು. ರೋಗಿಯಾಗಿದ್ದರೂ ನಿತ್ಯ ಮಸ್‌ಜಿದ್ ಮುಬಾರಕ್‌ಗೆ ಹೋಗಿ ನಮಾಝ್ ಅನುಷ್ಠಿಸುತ್ತಿದ್ದರು.

ಇತೀಚೆಗೆ ಮೃತರಾದ ಇನ್ನಿಬ್ಬರು ದರ್‌ವೇಶ್‌ಗಳ ಜನಾಝ ಗಾಯಿಬ್ ಹಿಂದೆ ಅನುಷ್ಠಿಸಲಾಗಿತ್ತು. ಅವರ ಬಗ್ಗೆ ವಿವರ ನೀಡಿರಲಿಲ್ಲ. ದರ್‌ವೇಶ್‌ಗಳು ಖಾದಿಯಾನ್ ರಕ್ಷಣೆಗೋಸ್ಕರ ಬಹಳ ತ್ಯಾಗ ಮಾಡಿದವರಾಗಿದ್ದಾರೆ. ಅವರು ಬಹಳ ಕಷ್ಟದಿಂದಲೂ ಬಡತನದಿಂದಲೂ ಜೀವಿಸಿ ಖಾದಿಯಾನ್‌ನನ್ನು ರಕ್ಷಿಸಿದರು. ಅವರಲ್ಲೊಬ್ಬರು ಮಿರ್ಝಾ ಮುಹಮ್ಮದ್ ಇಖ್‌ಬಾಲ್ ಸಾಹೇಬರಾಗಿದ್ದಾರೆ. ಅವರು 11-6-2014ರಂದು ಮೃತರಾದರು. إِنَّا لِلّٰهِ وَإِنَّا إِلَيْهِ رَاجِعُونَ ಅವರ ಅಜ್ಜ ಹಝ್ರತ್ ಮಿರ್ಝಾ ರಸೂಲ್ ಬೇಗ್ ಸಹಾಬಿ ಆಗಿದ್ದರು. ಅವರ ತಾಯಿಯ ತಂದೆ ಹಝ್ರತ್ ಮಿರ್ಝಾ ರಿಯಾಝ್ ಬೇಗ್ ಸಹ ಸಹಾಬಿ ಆಗಿದ್ದರು. 313 ದರ್‌ವೇಶ್‌ಗಳಲ್ಲಿ ಮಿರ್ಝಾ ಮುಹಮ್ಮದ್ ಇಖ್‌ಬಾಲ್ ಸೇರಿದ್ದಾರೆ.

ಚೌಧರಿ ಮನ್‌ಝೂರ್ ಅಹ್ಮದ್ ಸಾಹಿಬ್ ಚೀಮಾ 94ನೇ ವಯಸ್ಸಿನಲ್ಲಿ 26-7-14ರಂದು ನಿಧನ ಹೊಂದಿದರು. إِنَّا لِلّٰهِ وَإِنَّا إِلَيْهِ رَاجِعُونَ. ಅವರು ಚೌಧರಿ ನೂರ್ ಅಲಿ ಸಾಹೇಬ್ ಚೀಮಾ ಎಂಬ ಸಹಾಬಿಯ ಹಿರಿಯ ಪುತ್ರರಾಗಿದ್ದಾರೆ. ಅವರು ಹಿಂದೆ ಸೇನೆಯಲ್ಲಿ ಭರ್ತಿಯಾಗಿದ್ದರು. ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಖಾದಿಯಾನಿನ ರಕ್ಷಣೆಗೋಸ್ಕರ ಯುವಕರನ್ನು ಆಮಂತ್ರಿಸಿದಾಗ ಅವರು ಖಾದಿಯಾನಿನ ರಕ್ಷಣೆಗೋಸ್ಕರ ತನ್ನನ್ನು ಅರ್ಪಿಸಿದರು. ಅವರು ವೃದ್ಧಾವಸ್ಥೆಯಲ್ಲೂ ಊರುಗೋಲಿನ ಸಹಾಯದಿಂದ ನಮಾಝಿಗಾಗಿ ಮಸ್‌ಜಿದ್‌ಗೆ ಆಗಮಿಸುತ್ತಿದ್ದರು. ಅವರು ಪ್ರೀತಿಸುವ ಸ್ವಭಾವದವರೂ ಸಂತೋಷಚಿತ್ತರೂ ಮೂಸಿಯೂ ಆಗಿದ್ದರು.

--------------*****-------------

*Friday Sermon delivered by Hadrath Khaleefatul Masih Al Khamis(atba)*

*at Masjid Baithul Futhuh, London on 21-11-2014.*

Summarized by *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M P Ibrahim | ***Typing:*** U Basheer Ahmad

*Published By:* **Kannada Isha'at Team** for **Nazarath Nashr-O-Isha'ath, Qadian**

**Email**: *khutuba.kannada@gmail.com*